# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 30-7-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಕಚ್ಚಾ ಗೋಡಂಬಿ ಜಾಗತಿಕ ಉತ್ಪಾದನೆ ಸ್ವಲ್ಪ ಹೆಚ್ಚಳ

INC(ಇಂಟರ್‌ನ್ಯಾಶನಲ್ ಡ್ರೈಡ್ ಫ್ರೂಟ್ ಕೌನ್ಸಿಲ್) ಪ್ರಕಾರ ಈ ವರ್ಷ 2021–22ರಲ್ಲಿ ಜಾಗತಿಕ ಕಚ್ಚಾ ಗೋಡಂಬಿ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಸ್ವಲ್ಪ ಹೆಚ್ಚಳವಾಗಬಹುದೆನ್ನಲಾಗಿದೆ. ಹಲವಾರು ದೇಶಗಳಲ್ಲಿ ಉತ್ಪಾದನೆ ಹಿನ್ನಡೆಯಾಗಿದ್ದರೂ ಒಟ್ಟು ಜಾಗತಿಕ ಉತ್ಪಾದನೆಯಲ್ಲಿ ಹೆಚ್ಚಳವಾಗಲಿದೆಯೆನ್ನಲಾಗಿದೆ. ಭಾರತ,ವಿಯೆಟ್ನಾಂ, ಬೆನಿನ್, ಬ್ರೆಜಿಲ್‌ಗಳಲ್ಲಿ ಉತ್ಪಾದನೆ ಹಿನ್ನಡೆಯಾಗಿದೆಯೆನ್ನಲಾಗಿದ್ದು, ನೈಜೀರಿಯಾ, ಗಿನಿಯಾ ಬಿಸಾವ್, ಬುರ್ಕಿನೋಫಾಸ್‌ಗಳಲ್ಲಿ ಗಣನೀಯ ಉತ್ಪಾದನಾ ಹೆಚ್ಚಳವಾಗಿದೆಯೆನ್ನಲಾಗಿದೆ.

## ಜೂನ್ ತಿಂಗಳಲ್ಲಿ ಭಾರತದಿಂದ ತೈಲ ಹಿಂಡಿಗಳ ರಫ್ತು 119 ಶೇಕಡಾ ಹೆಚ್ಚಳ

2022ರ ಜೂನ್ ತಿಂಗಳಲ್ಲಿ ಭಾರತದಿಂದ 431,840 ಟನ್ ತೈಲ ಹಿಂಡಿ ರಫ್ತಾಗಿದ್ದು 2021 ಜೂನ್‌ನಲ್ಲಿ 203,868 ಟನ್ ರಫ್ತಾಗಿತ್ತು ಹಾಗೂ ಈ ವರ್ಷ ಜೂನ್‌ನಲ್ಲಿ ದುಪ್ಪಟ್ಟಿಗೂ ಅಧಿಕ 119 ಶೇಕಡಾ ಹೆಚ್ಚಳ ಕಂಡಿದೆಯೆಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ ಆಫ್ ಇಂಡಿಯಾದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಒಟ್ಟು 2022 ಎಪ್ರಿಲ್‌ನಿಂದ ಜೂನ್ ಅವಧಿಯಲ್ಲಿ 1021,265 ಟನ್‌ಗಳು ರಫ್ತಾಗಿದ್ದು 2021 ರ ಇದೇ ಅವಧಿಯಲ್ಲಿ 735,892 ಟನ್ ರಫ್ತಾಗಿತ್ತು ಹಾಗೂ 2022 ಕ್ಕೆ 39 ಶೇಕಡಾ ಹೆಚ್ಚಳ ಕಂಡಿದೆ.ಇದರಲ್ಲಿ ಸಾಸಿವೆ ಹಿಂಡಿ 2021 ರ ಎಪ್ರಿಲ್–ಜೂನ್ ಅವಧಿಯಲ್ಲಿದ್ದ 384,807 ಟನ್‌ಗಳಿಂದ 706,904 ಟನ್‌ಗಳಿಗೆ ನೆಗೆತ ಸಾಧಿಸಿದೆ. 84 ಶೇಕಡಾ ಹೆಚ್ಚಳ ಪ್ರಸ್ತುತ ಭಾರತ ಸಾಸಿವೆಹಿಂಡಿಯ ಸ್ಪರ್ಧಾತ್ಮಕ ಪೂರೈಕೆದಾರ ದೇಶವಾಗಿದೆಯೆನ್ನಲಾಗಿದೆ.

## ಸೋಯಾಮೀಲ್ ರಫ್ತು ಬಹಳ ಇಳಿಕೆ

ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಸೋಯಾಮೀಲ್ ದರ ಅತಿ ಹೆಚ್ಚಳವಿರುವುದರಿಂದ ರಫ್ತು ಇಳಿಕೆಯಾಗಿದೆ. 2022 ಎಪ್ರಿಲ್‌ನಿಂದ ಜೂನ್ ಅವಧಿಯಲ್ಲಿ ಭಾರತದಿಂದ 76093 ಟನ್ ಸೋಯಾಮೀಲ್ ರಫ್ತಾಗಿದ್ದು 2021 ರ ಇದೇ ಅವಧಿಯಲ್ಲಿ 118,057 ಟನ್ ಸೋಯಾಮೀಲ್ ರಫ್ತಾಗಿತ್ತೆಂದು SEA ಯ ಪ್ರಕಟಣೆ ತಿಳಿಸಿದೆ. ಎಪ್ರಿಲ್‌ನಲ್ಲಿ 25265 ಟನ್, ಮೇ ಯಲ್ಲಿ 18634 ಟನ್ ಹಾಗೂ ಜೂನ್‌ನಲ್ಲಿ 32194 ಟನ್ ಸೋಯಮೀಲ್ ಭಾರತದಿಂದ ರಫ್ತಾಗಿದೆಯೆನ್ನಲಾಗಿದೆ. ಭಾರತದ ಸೋಯಾಮೀಲ್ FOB US $ 675 ಹಾಗೂ ಅರ್ಜೆಂಟಿನಾ CIF Retterdam US $ 539 ಮತ್ತು ಬ್ರೆಜಿಲ್ US $ 522 ದರಗಳಿವೆಯೆನ್ನಲಾಗಿದೆ. ಹರಳುಹಿಂಡಿ ರಫ್ತು 2021 ಎಪ್ರಿಲ್–ಜೂನ್ ಅವಧಿಯಲ್ಲಿ 79271 ಟನ್‌ಗಳಿಂದ 2022 ರ ಅವಧಿಗೆ 83279 ಟನ್‌ಗಳಿಗೆ ಪ್ರಗತಿಯಾಗಿದೆಯೆನ್ನಲಾಗಿದೆ.

## ಗೋಡಂಬಿ ತಿರುಳು 2022 ರ ರಫ್ತು ಗುರಿ ಇಳಿಕೆಮಾಡಿದ ವಿಯೆಟ್ನಾಂ

2022 ಅರ್ಧ ವರ್ಷದಲ್ಲಿ ಹಿಂದಿನ ವರ್ಷಕ್ಕೆ ಹೋಲಿದಾಗ ರಫ್ತು ಗುರಿಯಲ್ಲಿ ವಿಯೆಟ್ನಾಂ 9.2 ಶೇಕಡಾ ಹಿನ್ನಡೆ ಅನುಭವಿಸಿದುದರಿಂದ ತನ್ನ ವಾರ್ಷಿಕ ರಫ್ತು ಗುರಿಯನ್ನು ಇಳಿಕೆ ಮಾಡಿ 3.2 ಮಿಲಿಯನ್ ಅಮೇರಿಕನ್ ಡಾಲರ್ ಗಳಿಕೆಯ ಗುರಿ ಹೊಂದಿದೆಯೆನ್ನಲಾಗಿದೆ. ಆಮದುದಾರರಲ್ಲಿ 14ನೇ ಅತಿ ದೊಡ್ಡ ಆಮದುದಾರ ರಷ್ಯಾಕ್ಕೆ ಆಮದು ನೀಡಿರುವುದು, ಯುರೋಪ್,ಅಮೇರಿಕಾಗಳಲ್ಲಿ ಹಣದುಬ್ಬರ ಹೆಚ್ಚಳ ಮುಂತಾದ ಕಾರಣಗಳಿಂದ ರಫ್ತು ಇಳಿಕೆಯಾಗಿದೆಯೆನ್ನಲಾಗಿದೆ.

## ಸೋಯಾಎಣ್ಣೆ ಫ್ಯೂಚರ್ ದರ ಹೆಚ್ಚಳ

CBOT ಸೋಯಾಎಣ್ಣೆ ಫ್ಯೂಚರ್ ದರ 7.62 ಶೇಕಡಾ ಹೆಚ್ಚಳವಾಗಿದ್ದು ಸೋಯಾಬೀನ್ ದರ 14.14 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ.(ಒಂದು ವಾರದ ಅವಧಿಯಲ್ಲಿ) ಪ್ರತಿಕೂಲ ಹವಾಮಾನ ಹಿನ್ನಲೆಯಲ್ಲಿ ಬೆಳೆಗೆ ಹಾನಿಯ ಭಯದಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ.